KAUK210002902019

# <u>ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಅಂಕೋಲಾ</u>

-ಃಉಪಸ್ಥಿತರುಃ-

ಪ್ರಶಾಂತ ಬಾದವಾಡಗಿ

ಬಿ.ಎ.,ಎಲ್.ಎಲ್.ಬಿ., (ಸ್ಪೆ.)

ಸಿವಿಲ್ ನ್ಯಾಯಾಧೀಶರು, ಅಂಕೋಲಾ

<u>ಮೂಲ ದಾವಾ ನಂಬರ : 28/2019</u>

ದಿನಾಂಕ: 27 ನೇ ಫೆಬ್ರವರಿ 2023

**<u>ವಾದಿಃ</u>**

ತಿಮ್ಮಣ್ಣ ತಂ. ಗೋವಿಂದ ನಾಯಕ ಗಾಂವಕರ,
ವಯಸ್ಸು: 76 ವರ್ಷ,
ಉ: ನಿವೃತ್ತ ಶಿಕ್ಷಕ ಹಾಗೂ ರೈತ
ಸಾಃ ಬೆಲೇಕೇರಿ, ತಾಃ ಅಂಕೋಲಾ

**(ಶ್ರೀ ಎನ್.ಎಸ್.ಎನ್., ವಕೀಲರು)**

–ವಿರುದ್ಧ–

**<u>ಪ್ರತಿವಾದಿಯರುಃ</u>**

1. ಶ್ರೀ ಬೀರಣ್ಣ ತಂ. ಅನಂತ ಗಾಂವಕರ,
ವಯಸ್ಸು: 55 ವರ್ಷ, ಉ: ರೈತಾಬಿ,
ಸಾಕೀನ ಮತ್ತು ಪೋಸ್ಟ್ಃ ಬೇಲೇಕೇರಿ,
ತಾಃ ಅಂಕೋಲಾ

2. ಶ್ರೀ ಹಮ್ಮಣ್ಣ ತಂ. ಶಿವಪ್ಪ ನಾಯ್ಕ,
ವಯಸ್ಸು: 50 ವರ್ಷ, ಉ: ರೈತಾಬಿ,

3. ಶ್ರೀಮತಿ ದೇವಮ್ಮ ಕೋಂ ನಾರಾಯಣ ನಾಯ್ಕ,
ವಯಸ್ಸು: 70 ವರ್ಷ, ಉ: ಮನೆವಾರ್ತೆ ಕೆಲಸ,

4. ಶ್ರೀಮತಿ ಹನಮು ತಂ. ಶಿವಪ್ಪ ನಾಯ್ಕ,
ವಯಸ್ಸು: 52 ವರ್ಷ, ಉ: ಮನೆವಾರ್ತೆ ಕೆಲಸ,

5. ಶ್ರೀಮತಿ ಬೇಬಿ ತಂ. ಶಿವಪ್ಪ ನಾಯ್ಕ,
ವಯಸ್ಸು: 50 ವರ್ಷ, ಉ: ಮನೆವಾರ್ತೆ ಕೆಲಸ,

2 ರಿಂದ 5 ನೇಯವರು ಸಾಕೀನಃ ಶೀಳ್ಯಾ
ಪೋಸ್ಟ್ಃ ಬಾಸಗೋಡ, ತಾಃ ಅಂಕೋಲಾ

**( 1 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್. ಹೆಚ್. ಎನ್., ವಕೀಲರು)**
**( 2 ರಿಂದ 5 ನೇ ಪ್ರತಿವಾದಿಯರು ಏಕಪಕ್ಷೀಯ)**

---

| | | | |
|---|---|---|---|
| ದಾವಾ ದಾಖಲಾದ ದಿನಾಂಕಃ | : 06-03-2019 | | |
| ದಾವೆಯ ಸ್ವರೂಪಃ | : ದಾವೆಯ ಮಾಗಣಿ, ನಿರ್ದೇಶನಾತ್ಮಕ ಮನಾಯಿ ಹಾಗೂ ಕೋರ್ಟ ಖರ್ಚು ಕೇಳಿ | | |
| ಸಾಕ್ಷಿಯನ್ನು ವಿಚಾರಣೆ ಪ್ರಾರಂಭ ದಿನಾಂಕಃ | 10-06-2022 | | |
| ಸಾಕ್ಷಿ ಮುಕ್ತಾಯ ದಿನಾಂಕಃ | 17-02-2023 | | |
| ತೀರ್ಪನ್ನು ನೀಡಿದ ದಿನಾಂಕಃ | 27-02-2023 | | |
| ಒಟ್ಟು ಕಾಲಾವಧಿಃ | ವರ್ಷ | ತಿಂಗಳು | ದಿವಸ |
| | -3- | -11- | -21- |

---

## ತೀರ್ಪು

ದಾವಾಸ್ತಿಯ ಅಂಚಿಗಿರುವ ಪ್ರತಿವಾದಿಯ ಆಸ್ತಿಯಲ್ಲಿರುವ ತೆಂಗಿನ ಮರಗಳನ್ನು ಕಡಿದು ಖುಲ್ಲಾಪಡಿಸಲು ಹಾಗೂ ಅಡಿಕೆ ಮರಗಳ ಕುರಿತು ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಪ್ರತಿವಾದಿಯರ ವಿರುದ್ಧ ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆ ನೀಡಲು ಹಾಗೂ ಕೋರ್ಟ ಖರ್ಚು ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ.

**ವಾದ ಪತ್ರದ ಸಂಕ್ಷಿಪ್ತ ವಿವರಃ**-

ಅಂಕೋಲಾ ತಾಲೂಕಿನ ಬೇಲೇಕೇರಿ ಗ್ರಾಮದ ಜಮೀನು ಸ. ನಂ. 11/6 ವಿಸ್ತೀರ್ಣ 0-01-12, ಆಕಾರ ರೂ. 0.03 ಹಾಗೂ ಅದರಲ್ಲಿರುವ ಗ್ರಾಮ ಪಂಚಾಯತಿ ಮನೆ ನಂ. 29 ಇವು ದಾವಾಸ್ತಿಗಳಾಗಿರುತ್ತವೆ. ಸದರಿ ದಾವಾಸ್ತಿಯಲ್ಲಿ ಇರುವ ಮನೆ ಹಂಚು ಹೊದಿಕೆಯುಳ್ಳ ವಾಸದ ಮನೆ ಆಗಿದ್ದು, ಅದು 1971-72 ನೇ ರಲ್ಲಿ ನಿರ್ಮಿಸಿದ್ದು, ಅವಾಗಿನಿಂದಲೂ ವಾದಿ ಹಾಗೂ ವಾದಿ ಕುಟುಂಬದವರು ನಿರಂತರವಾಗಿ ವಾಸ್ತವ್ಯ ಮಾಡಿಕೊಂಡು ಬಂದಿದ್ದಿರುತ್ತದೆ ಎಂದು ತಿಳಿಸಿರುತ್ತಾರೆ.

**2.** ಮುಂದುವರೆದು ದಾವಾಸ್ತಿಯ ಉತ್ತರ ದಿಕ್ಕಿನಲ್ಲಿ 1 ರಿಂದ 5 ನೇ ಪ್ರತಿವಾದಿಯರ ಮಾಲ್ಕಿ ವ ಕಬ್ಜಾ ವಹಿವಾಟಿಯಲ್ಲಿರುವ ಸ ನಂ. 9/6 ವಿಸ್ತೀರ್ಣ 0-06-0 ಇದ್ದು , ಅದರಲ್ಲಿ ಅನೇಕ ಜಾತಿಯ ಗಿಡಮರಗಳನ್ನು ಬೆಳೆಸಿದ್ದು, ಅವುಗಳ ಪೈಕಿ ಮೂರು ತೆಂಗಿನ ಮರಗಳು ಹಾಗೂ 8 ಅಡಿಕೆ ಮರಗಳು ದಾವಾಸ್ತಿಯ ಸರ್ವೆ ಗಡಿಯ ಸಮೀಪದಲ್ಲಿದ್ದು, ದಾವಾಸ್ತಿಯಲ್ಲಿರುವ ಮನೆಯ ಮೇಲೆ ಬಾಗಿ ನಿಂತಿದ್ದು, ಸದರಿ

ತೆಂಗಿನಮರಗಳಿಂದ ಬೀಳುವ ಕಾಯಿಗಳು, ತೆಂಗಿನ ಎಳೆಯ ಮಿಳ್ಳೆಗಳು ಹಾಗೂ ತೆಂಗಿನ ಮರ ಮತ್ತು ಅಡಿಕೆ ಮರಗಳ ಹೆಡೆಗಳು ವಾಸ್ತವ್ಯದ ಮನೆಗಳ ಹಂಚುಗಳನ್ನು ಒಡೆದು ವಾದಿ ಹಾಗೂ ಅವರ ಕುಟುಂಬಕ್ಕೆ ಪದೇ ಪದೇ ತೊಂದರೆ ಹಾಗೂ ದುಃಖಾಪತ್‌ಪಡಿಸುತ್ತಿದ್ದು, ಮಳೆಗಾಲದಲ್ಲಿ ಜೋರಾಗಿ ಬೀಸುವ ಗಾಳಿ ಹಾಗೂ ಮಳೆಯ ರಭಸಕ್ಕೆ ಸದರಿ ತೆಂಗಿನ ಮರ ಮತ್ತು ಅಡಿಕೆ ಮರಗಳು ವಾದಿಯರ ವಾಸ್ತವ್ಯದ ಮನೆಯ ಮೇಲೆ ಮುರಿದು ಬೀಳುವ ಸಾಧ್ಯತೆ ಇರುತ್ತದೆಂದು ತಿಳಿಸಿರುತ್ತಾರೆ.

3. ಅದು ಅಲ್ಲದೆ ಸದರಿ ದಾವಾ ಜಮೀನು ಪ್ರತಿವಾದಿಯರ ಜಮೀನಿಗಿಂತ 4 ಅಡಿ ಕೆಳಭಾಗದಲ್ಲಿದ್ದು, ದಾವಾ ಜಮೀನಿನ ಗುಂಟ ಮೊದಲಿನಿಂದಲೂ ಇರುವ ಮಣ್ಣಿನ ರಕ್ಷಣೆ ಗೋಡೆ ಹಾಳು ಮಾಡಿ ಮಳೆಗಾಲದ ನೀರು ವಾದಿ ವಾಸ್ತವ್ಯದ ಮನೆಯ ಪಂಚಾಂಗಕ್ಕೆ ಒಳ ನುಗ್ಗುವಂತೆ ಮಾಡಿದ್ದಿರುತ್ತದೆ. ಸದರಿ ವಾದಿ ಹಾಗೂ ಪ್ರತಿವಾದಿಯರು ಒಂದೇ ಕುಟುಂಬದ ಸದಸ್ಯರು ವ, ಸಂಬಂಧಿಕರಿದ್ದರೂ ಸಹ ವಾದಿಗೆ ಬುದ್ಧ್ಯಾಪೂರ್ವಕವಾಗಿ ತೊಂದರೆ ವ, ಉಪದ್ರವ ಕೊಡಲು ಪ್ರತಿವಾದಿಯರು ಒಂದಿಲ್ಲೊಂದು ರೀತಿಯಿಂದ ತೊಂದರೆ ನೀಡಿರುತ್ತಾರೆ. ಈ ಕುರಿತು ವಿನಂತಿಸಿದರೂ ಸಹ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

4. ಮುಂದುವರೆದು, ಸ ನಂ. 9/6 ಇದು ಪ್ರತಿವಾದಿಯರ ಸಾಮೂಹಿಕ ಆಸ್ತಿ ಇದ್ದರೂ ಸಹ, 1 ನೇ ಪ್ರತಿವಾದಿ ಸದರಿ ಜಮೀನಿನ ಕಬ್ಜಾ ವಹಿವಾಟಿ ಮಾಡುತ್ತಾ ಬಂದಿದ್ದು, ಅಡಿಕೆ ಮರ ಹಾಗೂ ತೆಂಗಿನ ಮರಗಳ ಕುರಿತು ಸುರಕ್ಷತಾ ಕ್ರಮ

ಕೈಗೊಳ್ಳುವಂತೆ ವಕೀಲರ ಮುಖಾಂತರ ದಿಃ 25–07–2018 ರಂದು ವಕೀಲರ ಮೂಲಕ ನೋಟೀಸು ನೀಡಿದರೂ ಸಹ ಸ್ಪಂದಿಸಿರುವುದಿಲ್ಲ. ಸದರಿ ಪ್ರತಿವಾದಿಯರ ಬೇಕಾಯ್ದೆ ಶೀರ ಕ್ರಮ ಕುರಿತು 1 ನೇ ಪ್ರತಿವಾದಿಯ ವಿರುದ್ಧ ಮಾನ್ಯ ಅಂಕೋಲಾ ತಹಶೀಲ್ದಾರ ಹಾಗೂ ತಾಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಇವರಿಗೆ ಅರ್ಜಿಗಳನ್ನು ನೀಡಿದಾಗ, 1 ನೇ ಪ್ರತಿವಾದಿಯ ಆಸ್ತಿಯಲ್ಲಿರುವ ಬಾಗಿ ನಿಂತಿರುವ ಮರಗಳಿಂದ ವಾಸ್ತವ್ಯದ ಮನೆಗೆ ತೊಂದರೆಪಡಿಸದಂತೆ ಕಡಿದು ಖುಲಾಪಡಿಸತಕ್ಕದ್ದು ಎಂದು ತಿಳಿಸಿರುತ್ತಾರೆ ಮತ್ತು ಎರಡು ತೆಂಗಿನ ಮರಗಳಿಗೆ ತಂತಿಯನ್ನು ಕಟ್ಟಿ ಎಳೆದು ಸುರಕ್ಷಿತ ಸ್ಥಿತಿಯಲ್ಲಿ ಇಡತಕ್ಕದ್ದೆಂದು ಆದೇಶವನ್ನು ಮಾಡಿದರೂ ಸಹ ಇದುವರೆಗೂ ಪ್ರತಿವಾದಿಯರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಅದು ಅಲ್ಲದೆ ಪ್ರತಿವಾದಿಯರ ವಿರುದ್ಧ ಈ ಮೊದಲು ಮೂಲ ದಾವೆ ನಂ. 106/1993 ಎಂದು ಸದರಿ ತೆಂಗಿನ ಮರ ಮತ್ತು ಅಡಿಕೆ ಮರ ಚಿಕ್ಕವುಗಳಿರುವಾಗಲೇ ತೆಗೆದುಹಾಕುವಂತೆ ಪ್ರಸ್ತುತ ವಾದಿ ದಾವೆ ಮಾಡಿದ್ದು ಇತ್ತು. ಸದರಿ ಸಮಯದಲ್ಲಿ ಕೋರ್ಟ ಕಮಿಷನರ್ ನೇಮಕಗೊಂಡು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ ನಂತರ, ವಾದಿ –ಪ್ರತಿವಾದಿಯರ ಹಿತೈಷಿಗಳು, ಹಿರಿಯರು ರಾಜಿ ಸಂಧಾನದ ಮೂಲಕ ಹೊಂದಾಣಿಕೆ ಮಾಡಿಸಿರುವುದರಿಂದ ಆ ದಾವೆ ಅಷ್ಟಕ್ಕೆ ಕೊನೆಗೊಂಡಿರುತ್ತದೆ. ಸದರಿ ದಾವೆಯಲ್ಲಿ ತೋರಿಸಿದ ತೆಂಗಿನ ಮತ್ತು ಅಡಿಕೆ ಮರಗಳೇ ಪ್ರಸ್ತುತ ವಾದಿಯ ವಾಸ್ತವ್ಯದ ಮನೆಗೆ ತೊಂದರೆ ಹಾಗೂ ಗಂಡಾಂತರ ಉಂಟುಪಡಿಸಿರುತ್ತವೆ. ಆದ್ದರಿಂದ ಈ ದಾವೆ ಸಲ್ಲಿಸುವ ಕಾರಣ ಉಂಟಾಗಿರುತ್ತದೆಂದು ತಿಳಿಸಿರುತ್ತಾರೆ.

5. ದಾವಾದ ಸಮನ್ಸ್ ಜಾರಿಯಾದ ನಂತರ 1 ನೇ ಪ್ರತಿವಾದಿಯು ವಕೀಲರ ಮುಖಾಂತರ ಹಾಜರಾಗಿ ಪ್ರತಿವಾದಪತ್ರ ಸಲ್ಲಿಸಿದ್ದು, ಉಳಿದ ಪ್ರತಿವಾದಿಯರು ಏಕತರ್ಪಿ ಉಳಿದಿರುತ್ತಾರೆ.

**1 ನೇ ಪ್ರತಿವಾದಿಯ ಪ್ರತಿವಾದ ಪತ್ರದ ಸಂಕ್ಷಿಪ್ತ ವಿವರಃ**

6. ದಾವಾಸ್ತಿ ಹಾಗೂ ತಮ್ಮ ಆಸ್ತಿ ಒಂದಕ್ಕೊಂದು ಹೊಂದಿಕೊಂಡಿರುತ್ತದೆ ಎಂಬುವ ಸಂಗತಿಯನ್ನು ಹೊರತುಪಡಿಸಿ ಉಳಿದ ಸಂಗತಿಯನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಸದರಿ ವಾದಿಯು ಪ್ರತಿವಾದಿಗೆ ಸಂಬಂಧಿಸಿದ ಜಮೀನಿನ ಗಡಿಯನ್ನು ನಾಶಪಡಿಸುತ್ತಾ ಒಂದಿಲ್ಲೊಂದು ರೀತಿಯಿಂದ ತೊಂದರೆ ಕೊಡುತ್ತಲಿದ್ದಾನೆ. ವಾದಿ ಹೇಳಿದಂತೆ ಅಂಕೋಲಾ ತಹಶೀಲ್ದಾರರವರು ಇದುವರೆಗೂ ಈ ಪ್ರತಿವಾದಿಯ ವಿರುದ್ಧ ಆದೇಶ ಮಾಡಿರುವುದಿಲ್ಲ. ಸದರಿ ವಾದಿ ನೀಡಿದ ನೋಟಿಸಿಗೆ ಈ ಪ್ರತಿವಾದಿ ಮೌಖಿಕವಾಗಿ ಉತ್ತರಿಸಿದ್ದು, ಸದರಿ ಪ್ರತಿವಾದಿ ಆರ್ಥಿಕವಾಗಿ ಸಬಲತೆ ಹೊಂದಿಲ್ಲದಿರುವ ದುಷ್ಫಾಯ್ದೆ ಪಡೆದು ಒಂದಿಲ್ಲೊಂದು ರೀತಿಯಿಂದ ತೊಂದರೆ ಕೊಡುತ್ತಾ ಬಂದಿರುತ್ತಾರೆ. ವಾದಿ ಹೇಳುವಂತೆ ಈ ಪ್ರತಿವಾದಿಯು ಬೆಳೆಸಿದ ಗಿಡ –ಮರಗಳು ವಾದಿಗೆ ವ, ಅವರ ಕುಟುಂಬಕ್ಕೆ ಯಾವುದೇ ರೀತಿ ಇದುವರೆಗೂಾ ತೊಂದರೆ ಉಂಟುಪಡಿಸಿರುವುದಿಲ್ಲ ಮತ್ತು ಇನ್ನು ಮುಂದೆಯೂ ಸಹ ಯಾವುದೇ ಪ್ರಾಣಾಪಾಯ ಉಂಟಾಗುವ ಸಾಧ್ಯತೆ ಇರುವುದಿಲ್ಲವೆಂದು ತಿಳಿಸಿ ದಾವೆಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**7.** ವಾದ –ಪ್ರತಿವಾದಪತ್ರದಲ್ಲಿ ತಿಳಿಸಿದ ಸಂಗತಿಗಳ ಆಧಾರದ ಮೇಲಿಂದ ಮೊದಲಿನ ಪೀಠಾಸೀನಾಧಿಕಾರಿಗಳು ವಿವಾದಾಂಶಗಳನ್ನು ರಚಿಸಿದ್ದು, ಅವುಗಳು ಈ ಕೆಳಕಂಡಂತೆ ಇರುತ್ತವೆ.

**<u>ವಿವಾದಾಂಶಗಳು</u>**

1. Whether the plaintiff proves that the plaintiff is residing in suit property and the property of the defendant No.1 to 5 is situated towards northern side of the schedule property?

2. Whether the plaintiff proves that defendants had grown some trees and plants in their property out of which 3 coconut trees and 8 areca trees are near the boundary of the schedule property, those trees are tilted towards the home of the plaintiffs, branches of coconut trees and areca trees fall on the house of the plaintiff and causing damage to the tiles of the house of the plaintiff as those trees may fall due to heavy rain as pleaded in para 2 of the plaintiff?

3. Whether the plaintif is entitled for the relief as sought for?

4. What order or decree?

**8.** ದಾವೆಯಲ್ಲಿನ ಸಂಗತಿಗಳನ್ನು ಸಾಬೀತುಪಡಿಸಲು ವಾದಿಯು ಪಿಡಬ್ಲ್ಯೂ-1 ಎಂದು ಸಾಕ್ಷಿ ನುಡಿದು, ತನ್ನ ಪರ ನಿ.ಪಿ. 1 ರಿಂದ 23 ಎಂದು ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಯರ ಪರ ಸಾಕ್ಷಿ ಮಾಡಿಸಿರುವುದಿಲ್ಲ ಹಾಗೂ ವಾದಿ ಪರ ಮಾಡಿದ ಸಾಕ್ಷಿಯನ್ನು ಪಾಟೀಸವಾಲಿಗೊಳಪಡಿಸಿರುವುದಿಲ್ಲ.

**9.** ವಾದಿ-ಪ್ರತಿವಾದಿಯರ ಪರ ಸುನಾವಣೆಯನ್ನು ಆಲಿಸಿ, ಸಾಕ್ಷಿ ಅವಲೋಕಿಸಿದ ನಂತರ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದ್ದೇನೆ.

ವಿವಾದಾಂಶ ನಂ. 1: ಸಕಾರಾತ್ಮಕ

ವಿವಾದಾಂಶ ನಂ. 2: ಭಾಗಶಃ ಸಕಾರಾತ್ಮಕ

ವಿವಾದಾಂಶ ನಂ. 3: ಭಾಗಶಃ ಸಕಾರಾತ್ಮಕ

ವಿವಾದಾಂಶ ನಂ. 4: ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

10. **ವಿವಾದಾಂಶ ನಂ. 1** :- ದಾವೆಯಲ್ಲಿಯ ಸಂಗತಿಗಳನ್ನು ಸಾಬೀತುಪಡಿಸಲು ವಾದಿ ಪಿಡಬ್ಲ್ಯೂ-1 ಎಂದು ಸಾಕ್ಷಿ ನುಡಿದಿದ್ದು, ವಾದಪತ್ರದಲ್ಲಿ ತಿಳಿಸಿದ ಸಂಗತಿಗಳನ್ನೇ ತನ್ನ ಮುಖ್ಯ ಸಾಕ್ಷಿ ಪ್ರಮಾಣಪತ್ರದಲ್ಲಿ ಪುನರುಚ್ಚರಿಸಿರುತ್ತಾರೆ.

**11.** ದಾವಾಸ್ತಿಯು ತನ್ನ ಮಾಲ್ಕಿ ವ, ಕಬ್ಜಾ ವಹಿವಾಟಿಯಲ್ಲಿರುತ್ತದೆ ಎಂದು ಪಿಡಬ್ಲ್ಯೂ 1 ರವರು ತಮ್ಮ ಸಾಕ್ಷಿಯಲ್ಲಿ ತಿಳಿಸಿರುತ್ತಾರೆ. ಈ ಕುರಿತು ವಾದಿ ಹಾಜರುಪಡಿಸಿದ ನಿಪಿ–1 ದಾಖಲೆ ಅವಲೋಕಿಸಲು ಸ ನಂ. 11/6 ಇದು ವಾದಿ ಹೆಸರಿರುವುದು ಕಂಡುಬರುತ್ತದೆ. ನಿಪಿ– 2 ಎಂದು ಗುರುತಿಸಲಾದ ಜಮೀನು ಪಹಣಿ ಪತ್ರಿಕೆ, ಪ್ರತಿವಾದಿಯರ ಹೆಸರಿನಲ್ಲಿರುವುದು ಕಂಡುಬರುತ್ತದೆ. ಸದರಿ ದಾವಾಸ್ತಿಯಲ್ಲಿರುವ ಮನೆ ನಂ. 29 ರಲ್ಲಿ ವಾಸ್ತವ್ಯದ ಮನೆ ಇರುತ್ತದೆ ಎಂದು ವಾದಿ ಸಾಕ್ಷಿಯಲ್ಲಿ ತಿಳಿಸಿರುತ್ತಾರೆ. ಈ ಕುರಿತು ನಿಪಿ–3 ಹಾಜರುಪಡಿಸಿದ್ದು, ಅದು ಮನೆ ನಂ. 29 ರ ಕರಾಕರಣೆ ರಶೀದಿ ಇದ್ದು , ವಾದಿಯ ಹೆಸರಿನಲ್ಲಿರುವುದು ಕಂಡುಬರುತ್ತದೆ. ಸದರಿ ದಾವಾಸ್ತಿಯ ಉತ್ತರಕ್ಕೆ ಪ್ರತಿವಾದಿಯ ಆಸ್ತಿ ಇರುತ್ತದೆಂದು ವಾದಿ ತನ್ನ ಸಾಕ್ಷಿಯಲ್ಲಿ ತಿಳಿಸಿರುತ್ತಾರೆ.. ಈ ಕುರಿತು ಪ್ರತಿವಾದಿಯರು ಸಹ ತಮ್ಮ ಪ್ರತಿವಾದಪತ್ರದಲ್ಲಿ ಒಪ್ಪಿಕೊಂಡಿದ್ದು, ಕಾರಣ ವಿವಾದಾಂಶ ನಂ.1 ಕ್ಕೆ '**ಸಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

**12.** **ವಿವಾದಾಂಶ ನಂ.2 ಮತ್ತು 3**:– ಈ ಎರಡು ವಿವಾದಾಂಶಗಳು ಒಂದಕ್ಕೊಂದು ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**13.** ಪ್ರತಿವಾದಿಯರು ದಾವಾಸ್ತಿ ಗಡಿಗುಂಟ ಬೆಳೆದ ಮೂರು ತೆಂಗಿನ ಮರ, ಎಂಟು ಅಡಿಕೆ ಮರಗಳಿಂದ ದಾವಾಸ್ತಿಯಲ್ಲಿರುವ ವಾದಿ ವಾಸದ ಮನೆಗೆ ಹಾನಿಯಾಗಿ, ಮಳೆಗಾಳಿಗೆ ಮುರಿದು ಬೀಳುವ ಸಾಧ್ಯತೆ ಇರುತ್ತದೆ ಎಂದು ವಾದಿ

ಸಾಬೀತುಪಡಿಸಿರುತ್ತಾರೆಯೇ ಎಂಬುವ ಸಂಗತಿಯನ್ನು ಅವಲೋಕಿಸಿದಾಗ, ಈ ಕುರಿತು ವಾದಿ ತನ್ನ ಸಾಕ್ಷಿಯಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆದರೆ ಸದರಿ ತೆಂಗಿನ ಮರಗಳು ಹಾಗೂ ಅಡಿಕೆ ಮರಗಳ ನಿಜವಾದ ಸ್ಥಿತಿಗತಿ ತಿಳಿಯಲು ಯಾವುದೇ ವೈಜ್ಞಾನಿಕ ವರದಿಯನ್ನು ವಾದಿ ಸಲ್ಲಿಸಿರುವುದಿಲ್ಲ. ಕಾರಣ ನೈಸರ್ಗಿಕ ಸಂಪತ್ತಾದ ತೆಂಗಿನ ಮರಗಳು ಮತ್ತು ಅಡಿಕೆ ಗಿಡಗಳನ್ನು ಕೇವಲ ವಾದಿಯ ಮೌಖಿಕ ಸಾಕ್ಷ್ಯದಿಂದ ತೆಗೆದುಹಾಕಲು ಬರಲಾರದು.

**14.** ಸದರಿ ತೆಂಗಿನ ಮರ ತೆಗೆದುಹಾಕುವಂತೆ ತಹಶೀಲ್ದಾರರವರು ಆದೇಶ ಮಾಡಿರುವುದಾಗಿ ವಾದಿ ತನ್ನ ದಾವೆಯಲ್ಲಿ ತಿಳಿಸಿರುತ್ತಾರೆ. ಆದರೆ ಆ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಬದಲಿಗೆ ವಾದಪತ್ರದಲ್ಲಿಯ ಸದರಿ ಎರಡು ತೆಂಗಿನ ಮರಗಳಿಗೆ ಜೋಡು ತಂತಿ ಹಾಕಿ ಕಟ್ಟಲು ತಿಳಿಸಿದರೂ ಸಹ ಪ್ರತಿವಾದಿಯರು ಆ ಕುರಿತು ಕ್ರಮ ಕೈಗೊಂಡಿರುವುದಿಲ್ಲವೆಂದು ಅಸಲರ್ಜಿ ಖಂಡಿಕೆ ಸಂಖ್ಯೆ 3 ರಲ್ಲಿ ತಿಳಿಸಿರುವುದು ಕಂಡುಬರುತ್ತದೆ. ಕಾರಣ ದಾವಾಸ್ತಿಯ ಗಡಿಗುಂಟ ಪ್ರತಿವಾದಿಯರು ಬೆಳೆಸಿದ 3 ತೆಂಗಿನ ಮರ ಹಾಗೂ 8 ಅಡಿಕೆ ಮರಗಳಿಂದ ದಾವಾಸ್ತಿಯಲ್ಲಿರುವ ಮನೆಗೆ ತೊಂದರೆ ಉಂಟಾಗದಂತೆ ಸುರಕ್ಷತಾ ಕ್ರಮವನ್ನು ಕೈಗೊಳ್ಳುವಂತೆ ಪ್ರತಿವಾದಿಗೆ ನಿರ್ದೇಶಿಸಿರುವುದರಿಂದ ಇಬ್ಬರ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಕಾರಣ ವಿವಾದಾಂಶ ನಂ. 2 ಮತ್ತು 3 ಕ್ಕೆ '**ಭಾಗಶಃ ಸಕಾರಾತ್ಮಕ**' ಎಂದು ಉತ್ತರಿಸಿದ್ದೇನೆ.

15. **<u>ವಿವಾದಾಂಶ ನಂ.4</u>**:– ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ.......

**<u>ಆದೇಶ</u>**

ವಾದಿಯ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿ ಮಾಡಲಾಗಿದೆ.

ದಾವಾಸ್ತಿಯ ಉತ್ತರದ ಗಡಿಗುಂಟ ಪ್ರತಿವಾದಿಯರ ಆಸ್ತಿಯಲ್ಲಿಯ ಮೂರು ತೆಂಗಿನ ಮರಗಳ ಕಾಯಿ, ತೆಂಗಿನ ಹೆಡೆ ಮತ್ತು ಎಳೆಯ ಮಿಳ್ಳೆಗಳು ಹಾಗೂ 8 ಅಡಿಕೆ ಮರಗಳ ಹೆಡೆಗಳು ಮತ್ತು ಇತರ ವಸ್ತುಗಳು ದಾವಾಸ್ತಿಯಲ್ಲಿರುವ ಹಂಚಿನ ಮನೆಯ ಮೇಲೆ ಬೀಳದಂತೆ ಹಾಗೂ ಜೋರಾಗಿ ಬೀಸುವ ಗಾಳಿ ಮಳೆಗೆ ದಾವಾಸ್ತಿಯಲ್ಲಿರುವ ಮನೆಯ ಮೇಲೆ ಮುರಿದು ಬೀಳದಂತೆ ಸುರಕ್ಷತಾ ಕ್ರಮಗಳನ್ನು ದಾವೆ ಡಿಕ್ರಿಯಾದ ಒಂದು ತಿಂಗಳೊಳಗಾಗಿ ಕೈಗೊಳ್ಳುವಂತೆ ಈ ಮೂಲಕ ನಿರ್ದೇಶನಾತ್ಮಕ ಮನಾಯಿ ಆದೇಶವನ್ನು ಪ್ರತಿವಾದಿಯರ ವಿರುದ್ಧ ಮಾಡಲಾಗಿದೆ.

ಅಂತಿಮ ಆದೇಶದಂತೆ ಡಿಕ್ರಿ ಬರೆಯಿರಿ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿದ ನಂತರ ಅದನ್ನು ಓದಿ ತಿದ್ದುಪಡಿ ಮಾಡಿ ನಂತರ ಅದನ್ನು ಇಂದು ದಿನಾಂಕ 27 ನೇ ಫೆಬ್ರವರಿ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**( ಪ್ರಶಾಂತ ಬಾದವಾಡಗಿ )**
**ಸಿವಿಲ್ ನ್ಯಾಯಾಧೀಶರು, ಅಂಕೋಲಾ**

## ಅನುಬಂಧ

**ವಾದಿ ಪರವಾಗಿ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ**

ಪಿ.ಡಬ್ಲ್ಯೂ. 1 – ತಿಮ್ಮಣ್ಣ ತಂ. ಗೋವಿಂದ ನಾಯಕ ಗಾಂವಕರ

**ಪ್ರತಿವಾದಿಯರ ಪರವಾಗಿ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ**

–ಇಲ್ಲಾ –

**ವಾದಿಯರ ಪರವಾಗಿ ಗುರುತಿಸಲ್ಪಟ್ಟ ದಾಖಲೆಗಳುಃ**

ನಿ.ಪಿ.1 ಮತ್ತು 2 – ಪಹಣಿ ಪತ್ರಿಕೆಗಳು

ನಿ.ಪಿ.3 – ಕರ ಪಾವತಿ ರಶೀದಿ

ನಿ.ಪಿ.4 – ಲೀಗಲ್ ನೋಟಿಸಿನ ಕಚೇರಿ ಪ್ರತಿ

ನಿ.ಪಿ.4(ಎ) – ಅಂಚೆ ಲಕೋಟೆ

ನಿ.ಪಿ.5 – ಲೀಗಲ್ ನೋಟಿಸಿನ ಕಚೇರಿ ಪ್ರತಿ

ನಿ.ಪಿ.6 ರಿಂದ 10 – ಅಂಚೆ ಸ್ವೀಕೃತಿ ಪ್ರತಿ

ನಿ.ಪಿ.11 – ಪೋಲೀಸ್ ಸ್ವೀಕೃತಿ ಪ್ರತಿ

ನಿ.ಪಿ.12 – ಅಂಕೋಲಾ ಪೋಲಿಸ್ ಠಾಣೆಯ ಪೋಲಿಸ್ ನೀರೀಕ್ಷಕರಿಗೆ ಫಿರ್ಯಾದುದಾರನು ನೀಡಿದ ಅರ್ಜಿ

ನಿ.ಪಿ.13 – ಹಿಂಬರಹ

ನಿ.ಪಿ.14 ರಿಂದ 23 – ಭಾವಚಿತ್ರಗಳು

**ಪ್ರತಿವಾದಿಯರ ಪರವಾಗಿ ಗುರುತಿಸಲ್ಪಟ್ಟ ದಾಖಲೆಗಳುಃ**

–ಇಲ್ಲಾ –

Digitally signed by PRASHANT BANGAREPPA BADAWADAGI
Location: CIVIL JUDGE AND JMFC COURT ANKOLA

**ಸಿವಿಲ್ ನ್ಯಾಯಾಧೀಶರು, ಅಂಕೋಲಾ**

<u>ಪ್ರತ್ಯೇಕವಾಗಿ ತೀರ್ಪಿನ ಆದೇಶವನ್ನು
ತೆರೆದ ನ್ಯಾಯಾಲಯದಲ್ಲಿ ಘೋಷಿಸಿಲಾಯಿತು</u>

## ಆದೇಶ

ವಾದಿಯ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿ ಮಾಡಲಾಗಿದೆ.

ದಾವಾಸ್ತಿಯ ಉತ್ತರದ ಗಡಿಗುಂಟ ಪ್ರತಿವಾದಿಯರ ಆಸ್ತಿಯಲ್ಲಿಯ ಮೂರು ತೆಂಗಿನ ಮರಗಳ ಕಾಯಿ, ತೆಂಗಿನ ಹೆಡೆ ಮತ್ತು ಎಳೆಯ ಮಿಳ್ಳೆಗಳು ಹಾಗೂ 8 ಅಡಿಕೆ ಮರಗಳ ಹೆಡೆಗಳು ಮತ್ತು ಇತರ ವಸ್ತುಗಳು ದಾವಾಸ್ತಿಯಲ್ಲಿರುವ ಹಂಚಿನ ಮನೆಯ ಮೇಲೆ ಬೀಳದಂತೆ ಹಾಗೂ ಜೋರಾಗಿ ಬೀಳುವ ಗಾಳಿ ಮಳೆಗೆ ದಾವಾಸ್ತಿಯಲ್ಲಿರುವ ಮನೆಯ ಮೇಲೆ ಮುರಿದು ಬೀಳದಂತೆ ಸುರಕ್ಷತಾ ಕ್ರಮಗಳನ್ನು ದಾವೆ ಡಿಕ್ರಿಯಾದ ಒಂದು ತಿಂಗಳೊಳಗಾಗಿ ಕೈಗೊಳ್ಳುವಂತೆ ಈ ಮೂಲಕ ನಿರ್ದೇಶನಾತ್ಮಕ ಮನಾಯಿ ಆದೇಶವನ್ನು ಪ್ರತಿವಾದಿಯರ ವಿರುದ್ಧ ಮಾಡಲಾಗಿದೆ.

ಅಂತಿಮ ಆದೇಶದಂತೆ ಡಿಕ್ರಿ ಬರೆಯಿರಿ.

**ಸಿವಿಲ್ ನ್ಯಾಯಾಧೀಶರು, ಅಂಕೋಲಾ**